ಇ) ಈ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಸಾಲ ಮಂಜೂರಾತಿಯಿಂದ ಹರಿಜನ ಗಿರಿಜನರ ಆರ್ಥಿಕ ಮಟ್ಟ ಸುಧಾರಣೆ ಆಗಿದೆಯೇ ಹಾಗಿದ್ದಲ್ಲಿ ಪ್ರತಿಶತ ಪ್ರಮಾಣವೆಷ್ಟು ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) 644

ಆ) ಹರಿಜನರು - 210

ಗಿರಿಜನರು - 34

ಇತರರು - 400

ಇ) ಕಳೆದ ಸಾಲಿನಲ್ಲಿಯೇ ಸಾಲಸೌಲಭ್ಯ ಒದಗಿಸಿರುವುದರಿಂದ ಹರಿಜನ ಮತ್ತು ಗಿರಿಜನರ ಆರ್ಥಿಕ ಮಟ್ಟ ಸುಧಾರಣೆ ಆಗಿರುವ ಬಗ್ಗೆ ಕುಟುಂಬವಾರು ಮೌಲ್ಯಮಾಪನ ನಡೆಸಿ, ಸುಧಾರಣೆಯ ಪ್ರಮಾಣವೆಷ್ಟು ಎಂಬುದನ್ನು ತಿಳಿಯಲಾಗುವುದು.

ರಾಜ್ಯದ ರೈತರ ಸಾಲ ಮನ್ನಾ ಮಾಡುವ ವಿಚಾರ

1456 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ರೈತರಿಗೆ ಸರ್ಕಾರಿ ಸಾಲ ಮನ್ನಾ ಆನ್ವಯ ರಾಜ್ಯದ ಎಷ್ಟು ಜನ ರೈತರಿಗೆ ಎಷ್ಟು ಮೊತ್ತದ ಸಾಲದ ಹಣ ಮನ್ನಾ ಆಗಿದೆ. (ವಿವರ ಕೊಡುವುದು)

ಆ) ಸಾಲ ಮನ್ನಾ ಯೋಜನೆ ರೈತರಿಗೆ ಅನ್ವಯಿಸಲು ಏನು ಅರ್ಹತೆಗಳಿರಬೇಕು (ವಿವರ ನೀಡುವುದು)

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು) :

ರೂ. 132.63 ಕೋಟಿ.

ಆ) ಸಂಖ್ಯೆ : 4,71,399

1. ದಿನಾಂಕ : 1-4-1986 ರ ನಂತರ ಪಡೆಯಲಾದ ಸಾಲಗಳಾಗಿರಬೇಕು. ಆ ಪೈಕಿ ದಿನಾಂಕ: 2-10-1989ಕ್ಕೆ ಸುಸ್ತಿಯಾದ ಸಾಲಗಳು ಸಾಲದ ಕಂತುಗಳು ಆಗಿರಬೇಕು. ಹಾಗೆ ಸುಸ್ತಿದಾರನಾದ ರೈತನು ಎರಡು ಅಥವಾ ಹೆಚ್ಚು ಬೆಳೆ ನಾಶದ ವರ್ಷಗಳನ್ನು ಅನುಭವಿಸಿರಬೇಕು ಮತ್ತು ಆ ಪೈಕಿ ಒಂದು ವರ್ಷದಲ್ಲಿ ಸುಸ್ತಿ ಉಂಟಾಗಿರಬೇಕು.
2. ದಿನಾಂಕ : 2-10-1989 ರಂದು ಅಥವಾ ಅದಕ್ಕೂ ಹಿಂದೆ ಸಾಲಗಾರನು ಮೃತನಾಗಿರಬೇಕು.
3. ದಿನಾಂಕ : 2-10-1989ಕ್ಕೆ ಸಾಲಗಾರನು ದಿವಾಳಿ ಎಂಬುದಾಗಿ ಘೋಷಿಸಲ್ಪಟ್ಟಿದ್ದ ಅಥವಾ ಸದರಿ ತಾರೀಖಿಗೆ ದಿವಾಳಿ ಎಂಬುದಾಗಿ ಘೋಷಿಸಲು ವ್ಯವಹಾರಣೆಗಳು ನಡೆಯುತ್ತಿದ್ದ ಪಕ್ಷದಲ್ಲಿ.
4. ಸಾಲಗಳು ದಿನಾಂಕ : 2-10-1989ಕ್ಕೆ ಮೂರು ವರ್ಷಗಳಿಗೂ ಹೆಚ್ಚು ಅವಧಿಯಿಂದ ಸುಸ್ತಿಯಾಗಿದ್ದಲ್ಲಿ.

ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸುವ ಬಗ್ಗೆ.

1601 - ಶ್ರೀ ಗುರುಪಾದಪ್ಪ ನಾಗಪ್ಪಾರ ಪಲ್ಲಿ (ಔರದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?